ಶ್ರೀ ಜಿ. ಮಾದೇಗೌಡ.—ಒಂದೇ ಸಭೆಗೆ ಇಬ್ಬರು—ಮೂವರು ಮಂತ್ರಿಗಳು ಹೊಗುತ್ತಾರೆ. ಆ ರೀತಿಯಾಗಿ ಹೋಗುವ ಸಂದರ್ಭದಲ್ಲಿ ಒಂದೇ ಕಾರಿನಲ್ಲಿ ಎಲ್ಲರೂ ಹೋಗುವುದು ಉಚಿತವಲ್ಲವೇ ?

ಶ್ರೀ ಡಿ. ದೇವರಾಜ ಅರಸ್.—ಒಂದು ಸಭೆಗೆ ಇಬ್ಬರು—ಮೂವರು ಹೋಗಬಾರದೆಂದು ನನ್ನ ಭಾವನೆ. ಮಂತ್ರಿಗಳಿಗೆ ನಾನು ಈ ರೀತಿ ಹೇಳಿಕೆ ಕೊಡುವಾಗ ನನ್ನನ್ನೇ ಬಲೆಗೆ ಕೆಡವಿದ್ದಾರೆ. ಅದು ಹೇಗೆಂದರೆ, ಒಂದೊಂದು ಸಾರಿ ಅಕಸ್ಮಾತ್ತಾಗಿ ಆ ರೀತಿ ಹೋಗಬೇಕಾಗುತ್ತೆ. ಮಾನ್ಯ ಶ್ರೀ ಪುಟ್ಟಸ್ವಾಮಯ್ಯನವರು ಅವರೆ ಕ್ಷೇತ್ರಕ್ಕೆ ಕರೆಯುತ್ತಾರೆ, ನಾನು ಒಪ್ಪಿಕೊಂಡಿದ್ದೇನೆ. ಇನ್ನೊಣ ಇನ್ನೊಬ್ಬರನ್ನೂ ಅಷ್ಟು ಹೊತ್ತಿಗೆ ಕರೆದುಬಿಟ್ಟಿರುತ್ತಾರೆ. ನಾನು ಹೊಡಡೋ ದಿವಸವೇ ಅವರೂ ಅಲ್ಲಿಗೆ ಬಂದಿರುತ್ತಾರೆ. ಇನ್ನೊಬ್ಬರೂ ಬಂದಿರುತ್ತಾರೆ. ಇದನ್ನು ಮೊದಲೇ ನನಗೆ ತಿಳಿಸಿರುವುದಿಲ್ಲ. ನಾನು ಒಬ್ಬನೇ ಹೋಗುತ್ತೇನೆಂದು ನಾನು ತಿಳಿದುಕೊಂಡಿದ್ದರೂ ಅಲ್ಲ ಮೂರು ನಾಲ್ಕು ಜನ ಮಂತ್ರಿಗಳು ಬಂದಿರುತ್ತಾರೆ. ಅದ್ದರಿಂದ—ಸಾಧ್ಯವಾದಷ್ಟು ಇಬ್ಬರು—ಮೂವರು ಒಂದೇ ಕಡೆ ಪ್ರವಾಸ ಮಾಡುವುದನ್ನು ಆದರಲ್ಲಿ ಏಕಕಾಲದಲ್ಲಿ ಹೋಗುವುದನ್ನು ಬಿಡಬೇಕೆಂದು ಹೇಳುತ್ತೇನೆ. ಕ್ಷಾಮ ನಿವಾರಣಾ ಕೆಲಸಕಾರ್ಯಗಳಿಗಾಗಿ ಬಿದರೆ, ಗುಲ್ಬರ್ಗ ಮುಂತಾದ ಪ್ರದೇಶಗಳಿಗೆ ಅನಿವಾರ್ಯವಾಗಿ ಕೆಲವರು ಒಂದೆ ಸಾರಿ ಹೋಗಬೇಕಾಗಿ ಬರುತ್ತದೆ. ಅಂತಹ ಸಮಯದಲ್ಲಿ ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎನ್. ಹಚ್ಚಮಾಸ್ತಿಗೌಡ.—ನಮ್ಮನ್ನು ಪೋಸದ ಬಲೆಗೆ ಹಾಕುವುದನ್ನು ಅವರು ಕೂಡಲೇ ಬಿಡಬೇಕು. ಅದನ್ನು ಎಲ್ಲರೂ ಮಾಡುತ್ತಾರೆ. ಅದು ಎಲ್ಲಾ ಕಡೆಯೂ ನಡೆಯುತ್ತಿದೆ. ಅನಿವಾರ್ಯವಾಗಿ ಕೆಲವು ಸಂದರ್ಭಗಳಲ್ಲಿ ಹೋಗಲೇ ಬೇಕಾಗುತ್ತದೆ.

ಶ್ರೀ ಟಿ. ಎಂ. ಮಂಜುನಾಥ್.—ಮಂತ್ರಿಗಳನ್ನು ಹೆಚ್ಚಿಗೆ ಕರೆಯುವುದನ್ನು ಬಿಡಬೇಕು ಎಂದು ಹೇಳುವುದು ಅದು ಸಾಧ್ಯವಿಲ್ಲದಂಥ ಕೆಲಸ. ಏಕೆಂದರೆ ಅವರೂ ಸಹ ಈ ದೇಶದ ಪ್ರಜಾ ಪ್ರತಿನಿಧಿಗಳು. ಅವರೂ ಸಹ ನಮ್ಮ ಹಾಗೆ ಜನತೆಯ ಕಷ್ಟಸುಖಗಳನ್ನು ಹಂಚಿಕೊಳ್ಳಬೇಕು ಅವರು ಕರೆದಾಗ ಬರಲೇಬೇಕು. ಒಂದು ಆದರ, ಪ್ರೀತಿ, ವಿಶ್ವಾಸಗಳಿಂದ ಕರೆಯುತ್ತಾರೆ ಒಂದು ಕಡೆ ಪ್ರೋಗ್ರಾಂ ಕೊಟ್ಟು ಆಮೇಲೆ ಯಾರಜೋ ಒತ್ತಾಯ ಬಂದರೆ ಅದನ್ನು ಕ್ಯಾನ್ಸಲ್ ಮಾಡುತ್ತಾರೆ. ಆದರಿಂದ ಅಗತಕ್ಕ ತೊಂದರೆ ಬಹಳ ಜಾಸ್ತಿ, ಆದ್ದರಿಂದ ಮೊದಲೇ ಪಾಗಾನ ಮಾಡಿದಂತೆ ನಡೆದು ಕೊಳ್ಳುವುದು ಸರಿಯಲ್ಲವೇ ?

ಶ್ರೀ ಡಿ. ದೇವರಾಜ ಅರಸ್.—ಕ್ಯಾನ್ಸಲ್ ಮಾಡುವ ಸಂದರ್ಭ ಬಂದಾಗ ಪಾತ್ರ ಅದನ್ನು ಮಾಡುತ್ತೇವೆ.

ಶ್ರೀ ಎಚ್. ಎಸ್. ಸಿದಪ್ಪ.—ಈ ಪಕ್ಷದವರು ಕರೆದಿರುತ್ತಾರೆ. ಆ ಮೇಲೆ ನಿಮ್ಮ ಪಕ್ಷದವರು ಕರೆದರೆ ನಮ್ಮ ಪಕ್ಷದವರ ಕರೆಯನ್ನು ಕ್ಯಾನ್ಸಲ್ ಮಾಡುತ್ತೀರಿ. ಆ ರೀತಿಯಾಗಿ ಇನ್ನು ಮುಂದೆ ಮಾಡಬೇಡಿ.

ಶ್ರೀ ಡಿ. ದೇವರಾಜ ಅರಸ್.—ಪ್ರವಾಸಮಾಡುವಾಗ ಶಾಸನ ಸಭೆಯ ಸದಸ್ಯರು ಯಾವ ಪಕ್ಷದವರೇ ಆಗಲೀ ಕರೆದರೆ, ನಿಮ್ಮ ಪಕ್ಷದವರೇ ಆಗಲಿ, ನಮ್ಮ ಪಕ್ಷದವರೇ ಆಗಲೀ ಕರೆದರೆ, ಹೋಗಲೇಬೇಕು. ಆದರೆ ಬೇರೆಯವರು ಕರೆದರೆ ಅಲ್ಲಿಗೆ ಹೋಗಬಾರದೆಂದು ಹೇಳುವವನು ನಾನಲ್ಲ. ಉದ್ದೇಶಪೂರ್ವಕವಾಗಿ ಆ ರೀತಿ ಏನಾದರೂ ಮಾಡಿದ್ದರೆ, ಅವರಿಗೆ ಖಂಡಿತವಾಗಿ ತಿಳುಸುತ್ತೇನೆ. ಸರ್ಕಾರದ ಕೆಲಸಕ್ಕೆ ನಾವೆಲ್ಲರೂ ಒಂದೇ ಎಂಬುದನ್ನು ತಿಳಿಸಬೇಕಾಗುತ್ತದೆ.

Disposal of Lands belonging to Tobacco Company. Sandur.

452. Sri KAGODU THIMMAPPA (Sagar).—

Will the Minister for Revenue be pleased to state.—

(*a*) the extent of land granted by the Ex-Ruler of Sandur to th Tobacoo Company that was in existence then:

(*b*) who is in possession of these lands at present ;

(*c*) whether Government have taken any action to distribute the lands belonging to the Tobacco Company ;

(*d*) whether it has come to the notice of the Government that the Ex-Ruler of Sandur has occupied the lands belonging to the Tobacco company illegally ?

Sri N. Hutchamasthy Gowda (Minister for Revenue).—

(*a*) 823 acres, 29 guntas.

(*b*) Government, Shivapur Education Committee and Sandur Education Society.

(*c*) Yes.

(*d*) No.

ಶ್ರೀ ಕಾಗೋಡು ತಿಮ್ಮಪ್ಪ.—ತಂಬಾಕು ಕಂಪೆನಿಗೆ ಕೊಟ್ಟಿರುವ ಜಮೀನಿನ ವಾಯಿದೆ ಯಾವಾಗ ಗತಿಸಿತು ?

†ಶ್ರೀ ಎನ್. ಹುಚ್ಚಮಾಸ್ತಿಗೌಡ.—30-6-1970ರಲ್ಲಿ.

ಶ್ರೀ ಕಾಗೋಡು ತಿಮ್ಮಪ್ಪ.—ಶಿವಪುರ ಶಿಕ್ಷಣ ಸಮಿತಿ ಮತ್ತು ಸಂಡೂರು ಎಜುಕೇಷನ್ ಸೊಸೈಟಿ ಹತ್ತಿರ ಕೆಲವು ಜಮೀನು ಇದೆಯೆಂದು ಹೇಳಿದ್ದೀರಿ. ಆ ಜಮೀನನ್ನು ಯಾರು ಕೊಟ್ಟರು, ಅದನ್ನು ಯಾವ ಆಧಾರದ ಮೇಲೆ ಕೊಟ್ಟಿದ್ದಾರೆಂಬುದನ್ನು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮೊದಲು 823 ಎಕರೆ 29 ಗುಂಟೆಯ ಜಮೀನನ್ನು ತಂಬಾಕು ಕಂಪೆನಿಗೆ ಕೊಟ್ಟಿದ್ದು. ಅದು 25 ವರ್ಷಗಳ ಗುತ್ತಿಗೆಯ ಮೇಲೆ. 1945ನೇ ಇಸವಿಯಲ್ಲಿ ಜಮೀನು ಹಂಚಿಹೋಗಿ ನಂದಿಹಳ್ಳಿಯ ಹತ್ತಿರ 258 ಎಕರೆ ಇನ್ನು ಇತರ ಎರಡು ಪ್ರದೇಶಗಳಲ್ಲಿ 450 ಎಕರೆ ಹಾಗೂ 115 ಎಕರೆ 29 ಗುಂಟೆ ನಿಂತಮೇಲೆ ಕಂಪೆನಿ ವಿಸರ್ಜನೀಯ ವಾಯಿತು. ಅದಾದ ಮೇಲೆ ಬೊಂಬಾಯಿ ಹೈಕೋರ್ಟಿನ ಆಫಿಷಿಯಲ್ ರಿಸೀವರ್ ಅವರಿಂದ ತೀರ್ಮಾನವಾಯಿತು. ಮಾನ್ಯ ಶ್ರೀ ಪ್ರತಾಪ್‌ಸಿಂಗ್ ಪುರುಷೋತ್ತಮ ಅವರ ಕಡೆ ಆ ಜಮೀನು ಹೋಗಿ ನಿಂತಿತು. ಅವರಿಂದ ಶಿವಪುರ ಶಿಕ್ಷಣ ಸಮಿತಿಯವರು ಮತ್ತು ಸಂಡೂರು ಎಜುಕೇಷನ್ ಸೊಸೈಟಿಯವರು 60-60 ಎಕರೆಗಳನ್ನು ತೆಗೆದುಕೊಂಡಿದ್ದಾರೆ. ಅದನ್ನು ಅಖೈರಾಗಿ 30-6-1970 ರಂದು ತೆಗೆದುಕೊಂಡಿದ್ದಾರೆ. ಅದು ಅಲ್ಲಗೇ ಮುಗಿದಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಇದರ ಲೀಜ್ ಅವರಿಗೆ 1970ರಲ್ಲಿಯೇ ಪೂರೈಸಿದೆ. ಆದ್ದರಿಂದ ಸರ್ಕಾರದವರು ಆ ಜಮೀನನ್ನು ಸ್ವಾಧೀನ ಪಡಿಸಿಕೊಂಡಿದ್ದಾರೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಶಿವಪುರ ಶಿಕ್ಷಣ ಸಮಿತಿಗೆ ಸಂಬಂಧಪಟ್ಟ ಹಾಗೆ ಈಗ 60 ಎಕರೆ ಸರ್ಕಾರದ ವಶದಲ್ಲಿದೆಯೇ ಹೊರತು ಮತ್ತಾವ ಎಜುಕೇಷನ್ ಸೊಸೈಟಿಯು ಸ್ವಾಧೀನ ದಲ್ಲಿಲ್ಲ.

Increasing the strength of Police Staff

458. Sri JAYAPRAKASH SHETTY (Brahmavar).—

Will the Chief Minister be pleased to state :—

(*a*) whether the Government has taken steps to increase the staff of the Police Stations in proportion to the increase in population ;

(*b*) if not, the reason for the same ?